CW-11
PW-11

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಸ್ಪೇಷಲ್ .ಕೇಸ್(ಎಸ್.ಸಿ./ಎಸ್.ಟಿ.) ಸಂಖ್ಯೆ 280/2023

ದಿ. 18-07-2026

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)

ಚಾಸಾ-11
ಫ್ರಾಸಾ-11

| | |
|---|---|
| ಸಾಕ್ಷಿದಾರರ ಹೆಸರು | ಆರ್.ಲೋಕೇಶ್ |
| ತಂದೆಯ ಹೆಸರು | ಎಸ್.ರಾಮಲಿಂಗಪ್ಪ |
| ವಯಸ್ಸು | 54 ವರ್ಷ |
| ಉದ್ಯೋಗ | ಸಿ.ಹೆಚ್.ಸಿ.ನಂ.322 ಸಿಂಧನೂರು ಡಿ.ವೈ.ಎಸ್.ಪಿ. . ಕಛೇರಿ |
| ವಾಸಸ್ಥಳ | ಸಿಂಧನೂರು |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ನಾನು 2005 ರಿಂದ ಈವರೆಗೆ ನಾನು ಸಿಂಧನೂರಿನ ಡಿ.ವೈ.ಎಸ್.ಪಿ. ಕಛೇರಿಯಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 12-12-2022 ರಂದು, ಚಾಸಾ-16 ಡಿ.ವೈ.ಎಸ್.ಪಿ. ರವರ ಜೊತೆಯಲ್ಲಿ ಈ ಪ್ರಕರಣದ ಪಂಚನಾಮ ಸ್ಥಳಕ್ಕೆ ಭೇಟಿ ನೀಡಿ, ಸದರಿ ಚಾಸಾ-16 ರವರ ಆದೇಶದಂತೆ ನಾನು ಸ್ಥಳದಲ್ಲಿದ್ದು, ನನ್ನ ಒನ್‌ಪ್ಲಸ್ ಕಂಪನಿಯ ಮೊಬೈಲ್ ಪೋನಿನಲ್ಲಿ ಸದರಿ ಸ್ಥಳ ಪಂಚನಾಮೆಯ ಭಾವ

CW-11
PW-11

ಚಿತ್ರಗಳನ್ನು ನಿಪಿ-3 ಮತ್ತು 4 ರಂತೆ ತೆಗೆದಿರುತ್ತೇನೆ ಜೊತೆಗೆ ವಿಡಿಯೋವನ್ನು ಸಹ ಮಾಡಿರುತ್ತೇನೆ. ನಂತರ ಚಾಸಾ-16 ರವರೊಂದಿಗೆ ಮಾನ್ಯ ಡಿ.ವೈ.ಎಸ್.ಪಿ. ರವರ ಕಛೇರಿಗೆ ಭೇಟಿ ನೀಡಿ ನನ್ನ ಮೊಬೈಲಿನಲ್ಲಿದ್ದ ಪೋಟೋಗಳನ್ನು ಇಲಾಖಾ ಕಂಪ್ಯೂಟರಿಗೆ ವರ್ಗಾಯಿಸಿಕೊಂಡು ತದನಂತರದಲ್ಲಿ ಸದರಿ ಪೋಟೋಗಳನ್ನು ಸೀಡಿಗೆ ವರ್ಗಾಯಿಸಿಕೊಂಡಿದ್ದು, ಅದೇ ಪೋಟೋನ ಕಲರ್ ಪ್ರಿಂಟ್ ಪಡೆದುಕೊಂಡಿರುತ್ತೇನೆ. ಸದರಿ ಪೋಟೋ, ಸೀಡಿ, ಹಾಗೂ ಕಲಂ 65(ಬಿ) ರಡಿಯ ಪ್ರಮಾಣ ಪತ್ರದೊಂದಿಗೆ ಚಾಸಾ-16 ಡಿ.ವೈ.ಎಸ್.ಪಿ. ರವರ ಮುಂದೆ ಹಾಜರುಪಡಿಸಿರುತ್ತೇನೆ. ಪ್ರಸ್ತುತ ನಾನು ಸದರಿ ಪೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲಾಗಿರುತ್ತದೆ, ಮತ್ತು ಪ್ರಸ್ತುತ ನಾನು ಸಲ್ಲಿಸಿರುವ ಭಾರತೀಯ ಸಾಕ್ಷ್ಯಾಧಿನಿಯಮ ಕಲಂ 65(ಬಿ) ರಡಿಯ ಪ್ರಮಾಣ ಪತ್ರವನ್ನು ಮತ್ತು ಸೀಡಿಯನ್ನು ಹಾಜರುಪಡಿಸಿದ್ದೇನೆ. ಸದರಿ ಪ್ರಮಾಣವನ್ನು ನಿಪಿ-17 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-17(ಎ) ಮತ್ತು ಸೀಡಿಯನ್ನು ನಿಪಿ-18 ಎಂದು ಗುರುತಿಸುತ್ತೇನೆ.

**ಪಾಟೀ ಸವಾಲು ಶ್ರೀ ಆರ್.ಪಿ.ಎನ್. ವಕೀಲರಿಂದ ಆರೋಪಿತರ ಪರಃ**

3. ನಿಪಿ-3 ಮತ್ತು 4 ರ ಪೋಟೋಗಳನ್ನು ನಾನೇ ಪ್ರಿಂಟ್ ಹಾಕಿಸಿರುತ್ತೇನೆ. ಸದರಿ ಪೋಟೋ ಪ್ರಿಂಟ್ ಹಾಕಿಸಿಕೊಳ್ಳಲು ಯಾವುದೇ ಬಿಲ್ಲು ಅಥವಾ ರಿಸಿಪ್ಟ್

CW-11
PW-11

ನ್ನು ನಮ್ಮ ತನಿಖಾಧಿಕಾರಿಗೆ ನಾನು ನೀಡಿರುವುದಿಲ್ಲ. ನನ್ನ ಮೊಬೈಲಿನಲ್ಲಿದ್ದ ಫೋಟೋ ಮತ್ತು ವಿಡಿಯೋವನ್ನು ನಮ್ಮ ಆಫೀಸ್ ಕಂಪ್ಯೂಟರ್ ಮುಖಾಂತರ ಸೀಡಿಗೆ ವರ್ಗಾಯಿಸಿಕೊಂಡಿರುತ್ತೇನೆ. ಭಾರತೀಯ ಸಾಕ್ಷ್ಯ ಸಂಹಿತೆ ಕಲಂ 65(ಬಿ) ಪ್ರಮಾಣ ಪತ್ರಕ್ಕೆ ನಾನು ಸಹಾಯಕನಾಗಿ ಸಹಿ ಮಾಡಿರುತ್ತೇನೆ. ನನ್ನ ಹೇಳಿಕೆಯಲ್ಲಿ ಒನ್‌ಪ್ಲಸ್ ಮೊಬೈಲಿನಿಂದ ಸ್ಥಳ ಪಂಚನಾಮೆಯ ಫೋಟೋವನ್ನು ತೆಗೆದಿದ್ದೇನೆ ಎಂದು ನಾನು ಹೇಳಿಲ್ಲ ಎಂದರೆ ಸಾಕ್ಷಿ, ಕೇವಲ ಮೊಬೈಲ್ ಎಂದು ಮಾತ್ರ ನಮೂಸಿದ್ದೇನೆ ಎನ್ನುತ್ತಾರೆ. ನಿಪಿ-17 ರ ಪ್ರಮಾಣ ಪತ್ರದಲ್ಲಿಯೂ ಒನ್‌ಪ್ಲಸ್ ಮೊಬೈಲ್ ಕಂಪನಿಯ ಹೆಸರು ನಮೂದಿಸಿಲ್ಲ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಾನು ನಿಪಿ-2 ರ ಪಂಚನಾಮೆ ಜರುಗಿಸುವ ಕಾಲದಲ್ಲಿ ನನ್ನ ಒನ್‌ಪ್ಲಸ್ ಮೊಬೈಲ್ ಪೋನಿನಿಂದ ಸ್ಥಳ ಪಂಚನಾಮೆಯ ಪೋಟೋಗಳನ್ನು ತೆಗೆದಿಲ್ಲ ಎನ್ನುವುದು ಸರಿಯಲ್ಲ. ನಾನು ನಿಪಿ-3 ಮತ್ತು 4 ಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿ ನಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಮಾಲ ಎನ್.ಡಿ.)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.